


### ಹಣ ಮಾಡಲು ಒಳ್ಳೆಯ ಸಲಹೆ

ವಸಂತ ಹೊಸಬೆಟ್ಟು ಲೇಖನ 'ಹಣ ಮಾಡುವುದು ಹೇಗೆ?' ಸಕಾಲಿಕ. ಹಣ ಮಾಡುವ ಕ್ರಿಯೆ ಪಾರದರ್ಶಕವಾಗಿದ್ದರೆ ಅದು ಸಾರ್ವಕಾಲಿಕವಾಗಿರುತ್ತದೆ.

-ಜಿ.ಕೆ.ಶ್ರೀಮತಿ- ಬೆಂಗಳೂರು, ಪಿ.ಗೋವಿಂದರಾಜ್ ತುಮಕೂರು, ಎಚ್.ಆನಂದಕುಮಾರ್- ಚಿತ್ರದುರ್ಗ, ಮಹಾಂತೇಶ ರಾಜಗೋಳಿ, ಯರಡಾಲ

### ಹೊಸ ಸಲಹೆ ಇಲ್ಲ

'ಹಣ ಮಾಡುವುದು ಹೇಗೆ?' ಓದಲು ಆಕರ್ಷಕವಾಗಿ ಕಂಡರೂ ವಿಶೇಷವಾದ ಯಾವುದೇ ಮಾಹಿತಿ ನೀಡದೆ ಸಪ್ಪೆಯಾಗಿದೆ. ಈಗಾಗಲೇ ಚಾಲ್ತಿಯಲ್ಲಿರುವ ಕೆಲವು ವಿಧಾನಗಳನ್ನು ತಿಳಿಸಿರುವ ಲೇಖಕರು, ಹೊಸದಾದ ಯಾವುದೇ ದಾರಿ ತೋರಿಸದೆ ನಿರಾಶೆಗೊಳಿಸಿದ್ದಾರೆ.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಚೀನಾದಿಂದ ಕಲಿಯಿರಿ

ಹಣ ಮಾಡುವುದು ಹೇಗೆನ್ನುವುದನ್ನು ಭಾರತೀಯರಿಗೆ ಕಲಿಸಿದ ಹೆಗ್ಗಳಿಕೆ ಚೀನಾದ್ದಾಗಿದೆ. ಚೀನಾ ಭಾರತಕ್ಕೆ ಹೊಟ್ಟೆ ಮನುಷ್ಯನ (ಲಾಫಿಂಗ್ ಬುದ್ಧ) ಬೊಂಬೆಗಳನ್ನು ಹಡಗುಗಳಲ್ಲಿ ತುಂಬಿಸಿ ಕಳುಹಿಸಿ ತಾನು ಸ್ವಯಂ ಹಣ ಮಾಡಿಕೊಂಡಿತು.

-ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಸಚಿವರಲ್ಲ, ಕಾರ್ಯದರ್ಶಿ

'ಹಣ ಮಾಡುವುದು ಹೇಗೆ?' ಲೇಖನದ 22ನೇ ಪುಟದಲ್ಲಿ 'ಒಂದು ರೂಪಾಯಿಯು ವಿತ್ತ ಸಚಿವರ ಸಹಿಯ ಮೂಲಕ ಬಂದರೆ...' ಎಂದು ವಸಂತ ಹೊಸಬೆಟ್ಟು ಬರೆದಿದ್ದಾರೆ. ಆದರೆ, ಒಂದು ರೂಪಾಯಿಯ ನೋಟಿಗೆ ಸಹಿ ಹಾಕುವವರು ವಿತ್ತ ಸಚಿವಾಲಯದ ಕಾರ್ಯದರ್ಶಿ, ವಿತ್ತ ಸಚಿವರಲ್ಲ.

-ನಾರಾಯಣ ಯಾಜಿ, ಶಿರಾಲಿ

### ಹಣ ಉಳಿಸಲು ಸಲಹೆ

ಸರಕು ಮಾರುಕಟ್ಟೆಯಲ್ಲಿ ಹಣ ಗಳಿಸುವುದನ್ನು ಸುಧಾ ಹೆಗಡೆ ಅವರ ಲೇಖನ ತಿಳಿಸಿಕೊಟ್ಟಿತು.

-ರಾಜಶೇಖರ ಗೌಡ, ಕೊಟ್ಟೂರು

### ಭೀಮಸೇನನಿಗೆ ದೊಡ್ಡ ನಮನ

ಕಾವೆಂಶ್ರೀ 'ಗಾನ ಸೂರ್ಯ...' ನಾಗರಾಜರಾವ್ ಹವಾಲ್ದಾರರ 'ಭೀಮಸೇನ ಕರೆದರೆ...' ಉತ್ತಮ ಮಾಹಿತಿ ನೀಡಿದವು.

-ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ವಿ.ಎಸ್.ರಾಮರಾವ್, ಹೊಸಪೇಟೆ

### ದೂರದೃಷ್ಟಿ, ಕ್ರಿಯಾಶೀಲತೆಯ ಫಲ

ಸರ್ಕಾರಿ ಅಧಿಕಾರಿಗಳು ದೂರದೃಷ್ಟಿಯಿಂದ, ಪ್ರಾಂಜಲ ಮನಸ್ಸಿನಿಂದ ಕಾರ್ಯಪ್ರವೃತ್ತರಾದುದರ ಫಲವೇ 'ಕಾರಂಜಿ ಕೆರೆ...' (ಬರಹ: ಬಿ.ಎಂ.ಲವಕುಮಾರ್) ಓದಿ ಖುಷಿಯಾಯಿತು.

ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎಂ.ಸರ್ದಾರ್, ಅರಸೀಕೆರೆ

### ನೀವು ಸರಿ ಉತ್ತರ ಕೊಟ್ಟರಿ

ನೀವು ಕೇಳಿದಿರಿ? ವಿಭಾಗದಲ್ಲಿ, –'ಅರ್ಧ ರಾತ್ರಿಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಹೋದ ಸಿದ್ಧಾರ್ಥನ...' ಬಗ್ಗೆ ನಾರಾಯಣ, ಗುಗ್ಗರಹಟ್ಟಿ ಹಾಗೂ 'ವ್ಯಕ್ತಿ ಸತ್ತಾಕ್ಷಣ ದೇಹ ಹೊರಗಿಡುವರಲ್ಲ...' ಎಂದು ವಿಜಯ ಕೆ. ವಿಭೂತಿಯವರು ಕೇಳಿದ ಪ್ರಶ್ನೆಗೆ– ರಾಮ್ ಕೊಟ್ಟ ಉತ್ತರ ಸಮಂಜಸವಾಗಿತ್ತು, ನನಗೆ ಬಹಳೇ ಹಿಡಿಸಿದವು.

-ಎಚ್.ಆರ್.ದೇಸಾಯಿ, ರಾಯಚೂರು

### ಎದೆ ಆರ್ದ್ರವಾಗಿಸಿದ ಕಥೆ

ಡಾ.ಬಸವರಾಜ ಸಾದರ ಅನುವಾದಿಸಿದ 'ನಾಚಿಕೆ' ಅಸ್ಸಾಮಿ ಕಥೆ ಪ್ರಸ್ತುತ ದಿನಗಳಲ್ಲಿ ನಮ್ಮ ರಾಜ್ಯದ ರಾಜಕೀಯ ವ್ಯವಸ್ಥೆ ತಲುಪಿರಬಹುದಾದ ಹೀನಾಯ ಸ್ಥಿತಿಯನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ.

-ಕಲ್ಲೇಶ್ ಕುಂಬಾರ್, ಹಾರೂಗೇರಿ/ ಶೀಲಾ ಸತ್ಯೇಂದ್ರ ಸ್ವಾಮಿ, ಹರವೆ/ ಪುಂಡಲೀಕ ಕಲ್ಲಿಗನೂರು, ಬೆಂಗಳೂರು/ ರುದ್ರೇಶ್ ಅದರಂಗಿ, ಕೋಲಾರ

### ಆಕರ್ಷಕ ಧಾರಾವಾಹಿ

ಶೈಲಜಾ ಹಾಸನ ಅವರ 'ಮೋಹ' ಕಾದಂಬರಿ ಆಕರ್ಷಕವಾಗಿ ಮೂಡಿ ಬರುತ್ತಿದೆ. ಕುತೂಹಲ ಕಾಯ್ದುಕೊಂಡಿದೆ.

-ಡಿ.ಎಸ್.ಮಧು, ತುಮಕೂರು/ ಕೊಹಿಮ, ಬಸರಕೋಡು/ ಬಿ.ಎಂ.ಬಾವಿಕಟ್ಟಿ, ಬಾಗಲಕೋಟೆ

### ಸಮರ್ಥ ಪ್ರತಿಪಾದನೆ

ಭಾವನಾಳ ಭಾವನೆ ಬಿಂಬಿಸಿರುವ ರೀತಿ ಮನೋಜ್ಞವಾಗಿದೆ. ಶೋಷಿತ ಹೆಣ್ಣಿನ ತುಮುಲ ಹಾಗೂ ಭಾವನೆಗಳನ್ನು ಸಮರ್ಥವಾಗಿ ಪ್ರತಿಪಾದಿಸುತ್ತಿದ್ದಾರೆ.

-ಸುಕನ್ಯ ಮುಕುಂದ, ಹಾಸನ

### ಹೃದಯಸ್ಪರ್ಶಿ ತೊಳಲಾಟ

ಭಾವನೆಗಳೇ ಇಲ್ಲದ ವ್ಯಕ್ತಿಗಳ ಜತೆಯ ತೊಳಲಾಟ ಹೃದಯಸ್ಪರ್ಶಿಯಾಗಿದೆ. ಧಾರಾವಾಹಿಯಲ್ಲಿ ಮುಂದೇನು ಎಂದು ಕಾತರ ಹುಟ್ಟಿಸಿದೆ.

-ಬಿ.ಎಸ್.ಮುಳ್ಳೂರ, ಹಲಗತ್ತಿ

ಸುಧಾ

fly mobile

**ರಸಪ್ರಶ್ನೆ ನಾಲ್ಕನೆ ಡ್ರಾ (ಜ.20) ದ ಬಹುಮಾನ ವಿಜೇತರು**

1) ಮುಕ್ತಾ ದೇಸಾಯಿ- ಬಳ್ಳಾರಿ
2) ಕೆ.ಲತೇಶ್‌ಕುಮಾರ್- ಮಂಗಳೂರು
3) ಮಂಜುನಾಥ ಕೆ. ಶೆಟ್ಟರ್- ಕೊಪ್ಪಳ
4) ಬಿ.ಎಸ್.ನವೀನ್‌ಕುಮಾರ್- ಬೆಂಗಳೂರು
5) ಜಿನೇಂದ್ರ ಪ್ರಕಾಶ್- ಮೈಸೂರು
6) ಮೋಹನ್‌ಮೂರ್ತಿ- ತುಮಕೂರು
7) ಶ್ರೀಮತಿ ಮಂಟೂರೆ- ಹಿರೇಕೆರೂರು
8) ಬಿ.ಎಸ್.ಆದಿತ್ಯ- ಬೆಂಗಳೂರು
9) ಗಣೇಶ್ ಆರ್.ಜಸ್ತಾರಗರ- ಹುಬ್ಬಳ್ಳಿ
10) ಎಚ್.ಸಿ.ವಸಂತ್- ಬೆಂಗಳೂರು




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974

ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ–ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.